ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ–ಆಡಳಿತ ವರ್ಗಾವಣೆ 01/2018-19 ದಿನಾಂಕ: 18.07.2018

**ವೈಯಕ್ತಿಕ ಗಮನಕ್ಕಾಗಿ**

# ಸುತ್ತೋಲೆ

ವಿಷಯ: **Teacher's Data Software** ತಂತ್ರಾಂಶದಲ್ಲಿ ಅಳವಡಿಸಿರುವ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಂತಿಮವಾಗಿ ಪರಿಶೀಲಿಸುವ ಬಗ್ಗೆ.

**Teacher's Data Software** ತಂತ್ರಾಂಶದಲ್ಲಿ, ರಾಜ್ಯದ ಎಲ್ಲಾ ಸರ್ಕಾರಿ ಪ್ರೌಡಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ – ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಳವಡಿಸಲು ಸೂಚಿಸಲಾಗಿದ್ದು, ಈವರೆವಿಗೂ ಸಾಕಷ್ಟು ಬಾರಿ ಈ ಕಛೇರಿಯಿಂದ ಹೊರಡಿಸಿದ ಸುತ್ತೋಲೆಗಳ ಮೂಲಕ ತಂತ್ರಾಂಶದಲ್ಲಿ ಹಂತ ಹಂತವಾಗಿ ಅಳವಡಿಸಲು ಸುದೀರ್ಘವಾಗಿ ಮಾರ್ಗದರ್ಶನ ನೀಡಲಾಗಿದೆ ಹಾಗೂ ಅದಲ್ಲದೇ ನಿಮ್ಮ ಜಿಲ್ಲೆಯಲ್ಲಿರುವ ಶಿಕ್ಷಕರ ಮಾಹಿತಿಗಳು ಅಪೂರ್ಣವಾದಾಗ ಪರಿಶೀಲಿಸಿ ಸರಿಪಡಿಸಲು ಸೂಚನೆಗಳನ್ನು ನೆನಪೋಲೆಗಳನ್ನು ನೀಡಲಾಗಿದೆ.

ಆದರೂ ಈವರೆವಿಗೂ **Teacher's Data Software** ತಂತ್ರಾಂಶದಲ್ಲಿ, ಅಳವಡಿಸಿದ ಮಾಹಿತಿಯು ಸಂಪೂರ್ಣವಾಗದೇ ಉಳಿದಿರುತ್ತದೆ. ಈ ವಿಚಾರದಲ್ಲಿ ಈ ಕೆಳಗೆ ನಮೂದಿಸಿದ ಅಂಶಗಳ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಕೂಡಲೇ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

- ನಿಮ್ಮ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಮಾಹಿತಿಗೆ ಸಂಬಂದಿಸಿದಂತೆ, ಡೈಸ್ ಕೋಡ್ ಹೊಂದಿರುವ ಕೆಲವು ಶಾಲೆಗಳನ್ನು ಆಯ್ಕೆ ಮಾಡಿ ಶಿಕ್ಷಕರ ಮಾಹಿತಿಯನ್ನು ಅಳವಡಿಸದೇ ಇರುವುದನ್ನು ಗಮನಿಸಲಾಗಿದೆ. ಸದರಿ ಶಾಲೆಗಳು ಚಾಲ್ತಿಯಲ್ಲಿರುವ ಬಗ್ಗೆ ದೃಡೀಕರಿಸಿಕೊಂಡು, ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಸೇವಾ ಮಾಹಿತಿಯನ್ನು ಕೂಡಲೇ ಅಳವಡಿಸಲು ಸೂಚಿಸಿದೆ ಹಾಗೂ ಸದರಿ ಪಟ್ಟಿಯಲ್ಲಿರುವ ಶಾಲೆಗಳನ್ನು ಶಿಕ್ಷಕರ ಆಯ್ಕೆ ಮಾಡದಿರಲು ಸಕಾರಣದೊಂದಿಗೆ ವರದಿಯನ್ನು ಈ ಕಛೇರಿಗೆ ನೀಡುವುದು ಹಾಗೂ ಕೂಡಲೇ ಇ–ಮೇಲ್ ಮೂಲಕ ಕಳುಹಿಸಿರುವ ( No data in TDS ) ಶಾಲಾ ಪಟ್ಟಿಯಲ್ಲಿ ಸೂಕ್ತ ಷರಾದೊಂದಿಗೆ **(remarks) update** ಮಾಡಿ ದಿನಾಂಕ: 20.07.2018 ರೊಳಗೆ ಕಳುಹಿಸುವುದು.
- ಜಿಲ್ಲಾ ಉಪನಿರ್ದೇಶಕರ ಲಾಗಿನ್ ಗಳಲ್ಲಿ ಈಗಾಗಲೇ ಅಳವಡಿಸಿರುವ ಶಿಕ್ಷಕರು Retired, Death, VRS, Transferred to other Dept, Dismiss, Promoted ಈ ಬಗ್ಗೆ

ಮಾಹಿತಿಯನ್ನು update ಮಾಡಲು ಅವಕಾಶ ಕಲ್ಪಿಸಲಾಗಿದೆ. (DDPI login- **Approve- DDPI ineligible)** ಅಂತಹ ಶಿಕ್ಷಕರ ಮಾಹಿತಿಯನ್ನು ತಪ್ಪದೇ update ಮಾಡಲು ತಿಳಿಸಿದೆ.

- ನಿಮ್ಮ ಜಿಲ್ಲೆಯ ಹಲವಾರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ. ನಿಮ್ಮ ಇ-ಮೇಲ್‌ಗೆ ಕಳುಹಿಸಿರುವ (HM not entered DDO list) Document ಅನ್ನು ಪರಿಶೀಲಿಸಿ, TDS ನಲ್ಲಿ ಅಳವಡಿಸದೇ ಇದ್ದಲ್ಲಿ ಕೂಡಲೇ ಅಳವಡಿಸಲು ಅಥವಾ ಸದರಿ ವೃಂದದ ಹುದ್ದೆಗಳಲ್ಲಿ ನಿವೃತ್ತಿಯಿಂದ, ವರ್ಗಾವಣೆಯಿಂದ, ಹುದ್ದೆ ಮಂಜೂರಾತಿ ಇಲ್ಲದ ಯಾವುದೇ ಕಾರಣಗಳಿಂದ ಖಾಲಿ ಇದ್ದರೆ ಮಾಹಿತಿಯನ್ನು ಈ ಕಛೇರಿಗೆ ವರದಿ ನೀಡುವುದು ಮತ್ತು ಇ-ಮೇಲ್ ಗೆ **reply** ಕಡ್ಡಾಯವಾಗಿ ಮಾಡುವುದು.

ಈ ಮೇಲೆ ಪ್ರಸ್ತಾಪಿಸಿದ ಅಂಶಗಳ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಕೂಡಲೇ ಕ್ರಮವಹಿಸಲು ಈ ಮೂಲಕ ಮತ್ತೊಮ್ಮೆ ಸೂಚಿಸಿದೆ.

ಈ ಸುತ್ತೋಲೆಯು **Teacher's Data Software** ತಂತ್ರಾಂಶದಲ್ಲಿ, ನಿಮ್ಮ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಅಳವಡಿಸಲು ಅಂತಿಮ **(Final Call)** ಅವಕಾಶವಾಗಿರುತ್ತದೆ. ತಪ್ಪಿದ್ದಲ್ಲಿ ಸಂಬಂದಪಟ್ಟ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರಶಿಕ್ಷಣಾಧಿಕಾರಿಗಳನ್ನು ಹಾಗೂ ನಿಮ್ಮನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು ಹಾಗೂ ನಿಯಮಾನುಸಾರ ಕ್ರಮತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ಎಚ್ಚರಿಕೆ ನೀಡಿದೆ.

ಅಪರ ನಿರ್ದೇಶಕರು(ಆಡಳಿತ)
**ಸಾರ್ವಜನಿಕ ಶಿಕ್ಷಣ ಇಲಾಖೆ**

ಪ್ರತಿಯನ್ನು

1. **ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ**
2. **ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ**

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ

Menu Provided in DDPI login- **Approve- DDPI ineligible**

This option is provided to update status such as Retired, Death, VRS, Transfered to other Dept, Dismiss, Promoted




